# ದೈವ ದೈವಗಳಾಚೆ



**ಅಂದಯ್ಯ ಅರವಟಗಿಮಠ**

ಕಲೆ: ವಿ.ಎಂ.ಮಂಜುನಾಥ್

ಗದುಗಿನಿಂದ ರೋಣಕ್ಕೆ ತೆರಳಲು ಎರಡು ದಾರಿಗಳಿವೆ. ಮುಖ್ಯರಸ್ತೆಯ ಬದಲಾಗಿ ಒಳದಾರಿಯಲ್ಲಿ ಮೂರ್ನಾಲ್ಕು ಊರು ಹಿಂದೊಗೆದು ಇಪ್ಪತ್ತು ಕಿಲೋಮೀಟರಿನಷ್ಟು ಹಾದಿಸವೆಸಿದರೆ ಪೀಕುಜಾಲಿಮರಗಳ ಮಧ್ಯ ಉದ್ದನೆಯ ಗರಸುಮಣ್ಣಿ ದಾರಿಯೊಂದು ತಗ್ಗುದಿನ್ನೆಗಳಿಂದ ತೆರೆದುಕೊಳ್ಳುತ್ತದೆ. ಅಲ್ಲೇ ಅರ್ಧ ಹೂತ ಕಪ್ಪು ಗೂಟಗಲ್ಲೊಂದರ ಮೇಲೆ ಹಳದಿ ಬಣ್ಣದ ಅಕ್ಷರಗಳು 'ಬೊಮ್ಮಸಾಗರ ಜಿರೋ ಕಿಲೋಮೀಟರ್'. ಬಾಣದ ಗುರುತಿನೆಡೆ ಹೆಜ್ಜೆಯಿಟ್ಟರೆ ನೆಲತಳದೊಂದಿಗೆ ಮುನಿಸಿಕೊಂಡ ಚೂಪುಗಲ್ಲುಗಳು ಮೋರಂಮಣ್ಣಿನಿಂದ ಮೇಲೆದ್ದ ಪರಿಣಾಮ ಸಲೀಸಾಗಿ ಉರುಳಲಾಗದ ದಾರಿಯದು. ಬಸ್ಸಿನ ಗಾಲಿಗಳು ತಮ್ಮ ಸ್ಪರ್ಶ ಪುಣ್ಯವನ್ನು ಇಲ್ಲಿ ಪಡೆದುಕೊಳ್ಳುವುದು ಹತ್ತೂರ ಹೊಲೆಮಾದಿಗರೆಲ್ಲ ಸೇರಿ ಮಾಂಸದೋಕುಳಿಯಾಡುವ ದುರ್ಗಮ್ಮನ ಜಾತ್ರೆಗೊಮ್ಮೆ. ಉಳಿದ ದಿನಗಳಲ್ಲಿ ಊರೊಳಗೆ ಬರಲು ಬೆದರಿದಂತಿರುವ ಬಸ್ಸುಗಳಿಗೆ ಊರ ಹೊರಗಿನ ಕೂಡುರಸ್ತೆಯೇ ನಿಲ್ದಾಣ. ಗದುಗಿಗೋ ರೋಣಕ್ಕೂ ಹೋಗಿ ಬರುವವರೆಲ್ಲ ಕೂಡುದಾರಿಯ ಖತ್ರಿಯಿಂದ ಊರೆಡೆಗೆ ಅರ್ಧ ಮೈಲು ಹೆಜ್ಜೆ ಹಾಕುವುದು ತಪ್ಪಿದ್ದಲ್ಲ.

ದಾರಿಯ ಮತ್ತೊಂದೆಡೆ ಹೊಲಗಳಲ್ಲಿನ ಸರುವಿನ ಹೊಳಘಟ್ಟಿಗಳಗುಂಟ ಹರಿದುಬರುವ ನೀರನ್ನು ಕೆರೆಗೆ ಹೊತ್ತೊಯ್ಯುವ ಕಾಲುವೆಯೊಂದು ಮಳೆಗಾಲದಲ್ಲಷ್ಟೇ ಎರಡು ಮೂರು ಬಾರಿ ತುಂಬಿ ಹರಿಯುವುದುಂಟು. ರಸ್ತೆ ಮತ್ತು ಕಾಲುವೆ ಮಧ್ಯೆ ತಡೆಗೋಡೆಯಂತಹದ್ದೇನೂ ಇರಲಿಲ್ಲ. ಕಾಲುವೆ-ರಸ್ತೆಗಳ ರಮ್ಯ ಸಮಾಗಮವು ಹಾದಿಸವಾರರಿಗೆ ಬುಗುಲು ತುಂಬಿತ್ತು. ಹೊಂದಿಡದು ಎರಡು ಮಳೀ ಕಟೀತಂದ್ರ ನೆಲಕಪ್ಪರಿಸಿ, ನೀರು ಪಾಲಾಗೋ ಅಂಜಿಕೀಗೆ ಅನ್ಯಥಾಗತಿ ಇಲ್ಲದೇ ಮಂದಿ ಕೈಯ್ಯಾಗ ಕೆರವು ಹಿಡಿದು ಹೊಲದ ಬದುವಿನ ರಜ್ಜಿನ್ಯಾಗ ಕಚಿಪಿಚಿ ಕಾಲಿಡ್ತಾ ಜೋಲಿ ಹಿಡಿದು ಖತ್ರಿ ಮುಟ್ಟೋದ್ರೊಳಗ ಮೂರೂ ಹನ್ನೊಂದಾಕಿತ್ತು. ಇದೇ ರಸ್ತೆಯ ಮತ್ತೊಂದು ಬದಿಯಲ್ಲಿ ಸಾಹುಕಾರರ ಹೊಲ. ಅಲ್ಲಿಯೂ ಜನ, ದನ ಒಡ್ಡು ದಾಟದಂತೆ ಕಂಟಿಬೇಲಿ. ಹೀಗೆ ಮುಂದೆ ಕವಲುಗಳಾಗಿ ಒಡೆಯುವ ರಸ್ತೆ ಊರು-ಕೇರಿಯನ್ನು ವಿಭಾಗಿಸಿದಂತಿದೆ. ಮನುಷ್ಯರನ್ನೂ. ಊರಮಂದಿಯ ಚಾಕರಿಗೆ ಬೇಕಿದ್ದ ಕೇರಿಮಂದಿಗೆ ಕಟ್ಟುನಿಟ್ಟುಗಳಿದ್ದವು. ಊರಹೋಟೆಲ್ಲಿನಲ್ಲಿ ನೆಲತಳವೇ ಅವರಿಗೆ ಕೂರುವ ಜಾಗವಾದರೆ, ಊರ ಕೆಲಸ್ಯಾರವನೂ ಕೇರಿಯವರಿಗೆ ಕ್ಷೌರ ಮಾಡುವಂತಿರಲಿಲ್ಲ. ಊರಿನ ಎಮ್ಮೆ ಬೋಳಿಸುವವನೇ ಕೇರಿಜನರ ಕ್ಷೌರ ಮಾಡುತ್ತಿದ್ದ, ಕತ್ತರಿಯೊಂದೇ. ಕೆರೆಯೊಳಗಿನ ನೀರು ತುಂಬಲೂ ಊರಜನರಿಗಾಗಿ ಕಾಯುವ ಸ್ಥಿತಿ.

ಎಲೆಕ್ಷನ್ಗೊಮ್ಮೆ ಬರುವ ಎಮ್ಮೆಲ್ಲೆ ಸಾಹೇಬ ಗೆದ್ದ ಖುಷಿಯ ವಿಜಯೋತ್ಸವಕ್ಕೂ ಊರೊಳಗ ಕಾಲಿಟ್ಟಿದ್ದು ಮಂದೀ ಮಖದಾಗ ಬೆಳಕು ಮೂಡಿಸಿತ್ತು. ಅಧಿಕಾರದ ಧ್ವನಿಯೊಳಗ ಸಾಹೇಬ 'ನಿಮ್ಮೂರಿಗೇನ್ ಬೇಕ್ರಲೇ ಮಕ್ಕಳ್ರ್ಯಾ' ಎಂದಾಗ ಊರ ಹಿರಿಯ್ಯಾರೆಲ್ಲ ಸೇರಿ 'ಊರ ಮುಂದಿನ ಅಗಸಿ ಬಾಗಿಲಿಗೆ ಲಕಾಲಕಾ